ಮಾಡಲಾಗುತ್ತಿದೆ.

- ಮೇಲ್ಕಾಣಿಸಿದಂತೆಯೂ ಜಮೀನು ಖರೀದಿ ಸಾಧ್ಯವಾಗದಿದ್ದ ಪಕ್ಷದಲ್ಲಿ, ಮನೆ ನಿವೇಶನಗಳ ಹಂಚಿಕೆಗಾಗಿ ಜಿಲ್ಲಾಧಿಕಾರಿಗಳಿಗೆ The Karnataka Acquision of Lands for Grant of House Sites Act, 1972 (Karnataka Act 18 of 1973) ಮತ್ತು ಅದಕ್ಕೆ ಸಂಬಂಧಿಸಿದ ನಿಯಮಾವಳಿಗಳಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಸತಿಗೆ ಯೋಗ್ಯವಾದ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಂದರ್ಭಾನುಸಾರ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ತಿಳಿಸಿದೆ.

ಉ) ಆಶ್ರಯ ಸಮಿತಿಗಳನ್ನು ಈಗಾಗಲೇ ರಚಿಸಲಾಗಿದ್ದು, ಬೇರೆ ರೀತಿ ರಚಿಸುವ ಉದ್ದೇಶ ಇರುವುದಿಲ್ಲ.

ಅಂಗನವಾಡಿ ಕೇಂದ್ರಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 199 (330)
ಸದಸ್ಯರ ಹೆಸರು : ಶ್ರೀ ರಹೀಂ ಖಾನ್ (ಬೀದರ್)
ಉತ್ತರಿಸುವ ಸಚಿವರು : ಶ್ರೀ ಸಿ.ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಪ್ರಶ್ನೆಗಳು:–

ಅ) ಬೀದರ್ ಜಿಲ್ಲೆಯ ಬೀದರ್ ಉತ್ತರ ಮತ ಕ್ಷೇತ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2008 ರಿಂದ ಇಲ್ಲಿಯವರೆಗೆ ಅನುಷ್ಠಾನಗೊಂಡ ಯೋಜನೆಗಳಾವವು? (ವಿವರ ನೀಡುವುದು);

ಆ) ಯೋಜನೆಗಳಿಗೆ ವೆಚ್ಚಮಾಡಿದ ಹಣವೆಷ್ಟು? (ಯೋಜನಾವಾರು ವಿವರ ಒದಗಿಸುವುದು);

ಇ) ಬೀದರ್ ಉತ್ತರ ಕ್ಷೇತ್ರದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಇರುತ್ತವೆ ಹಾಗೂ 2008 ರಿಂದ ಎಷ್ಟು ಹುದ್ದೆಗಳನ್ನು ನೇಮಕ ಮಾಡಲಾಗಿರುತ್ತದೆ? ವಿವರ ನೀಡುವುದು;

ಉತ್ತರಗಳು:–

ಅ) ಬೀದರ್ ಜಿಲ್ಲೆಯ ಬೀದರ್ ಉತ್ತರ ಮತಕ್ಷೇತ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2008 ರಿಂದ ಇಲ್ಲಿಯವರೆಗೆ ಅನುಷ್ಠಾನಗೊಂಡ ಯೋಜನೆಗಳ ವಿವರವನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಆ) ಯೋಜನೆಗಳಿಗೆ ವೆಚ್ಚಮಾಡಿದ ಹಣದ ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಇ) ಅನುಬಂಧ–2 ರಲ್ಲಿ ಒದಗಿಸಿದೆ.

ಪ್ರಶ್ನೆ ಸಂಖ್ಯೆ: 199 (330) ಕ್ಕೆ ಅನುಬಂಧ –1

ಕ್ರ. ಸಂ.	ಯೋಜನೆಯ ಹೆಸರು	2008–09 ಸಾಧನೆ		2009–10 ಸಾಧನೆ		2010–11 ಸಾಧನೆ		2011–12 ಸಾಧನೆ	
1	2	3	4	5	6	7	8	9	10
1.	ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಹೆಚ್ಚುವರಿ ಗೌರವಧನ ಯೋಜನೆ	248	13.62	290	38.90	426	36.82	235	34.00
2.	ನಿಗೃತಿಕ ಮಕ್ಕಳ ಕುಟೀರ ಯೋಜನೆ	110	5.08	68	3.05	118	5.10	73	3.18
3.	ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಕೇಂದ್ರ ಪುರಸ್ಕೃತ ಯೋಜನೆ	258	69.80	301	96.59	438	99.50	269	97.70
4.	ಅಂಗನವಾಡಿ ಕಟ್ಟಡ ನಿರ್ಮಾಣ ಯೋಜನೆ	02	6.90	05	15.00	19	65.24	–	–
5.	ಗ್ರಾಮೀಣ ಪ್ರದೇಶ ವಿದ್ಯಾರ್ಥಿನಿಯರಿಗೆ ಹಾಜರಾತಿ ಶಿಷ್ಯ ವೇತನ ಯೋಜನೆ	126	0.55	130	0.67	142	0.68	224	0.39
6.	ಉದ್ಯೋಗಸ್ಥ ಮಹಿಳೆಯರ ಮಕ್ಕಳ ಪಾಲನೆ ಮತ್ತು ಪೋಷಣೆ (ಯೋಜನೇತರ)	81	2.11	81	2.11	69	1.79	–	–
7.	ಶಾಲಾ ಪೂರ್ವ ಮಕ್ಕಳಿಗೆ ಊಟದ ಯೋಜನೆ ಮತ್ತು (ಯೋಜನೇತರ)	194.50	12.18	20338	226.10	21879	284.10	24927	165.48
8.	ಭಾಗ್ಯಲಕ್ಷ್ಮಿ	768	138.24	1122	213.18	673	127.87	32	6.08
9.	ಸ್ತ್ರೀ ಶಕ್ತಿ	160	3.85	135	0.52	478	4.02	143	1.03
10.	ಸಾಂತ್ವನ	1	1.94	1	1.60	1	9.65	1	5.00
11.	ಬಾಲಕಿಯರ ವಸತಿ ನಿಲಯ	50	6.00	50	60.00	50.	5.90	50	4.81
12.	ಮಹಿಳಾ ಕಾನೂನು ಪದವೀಧರರಿಗೆ ಸಹಾಯಧನ ಯೋಜನೆ	10	1.20	10	1.20	08	0.96	08	0.56

ಪ್ರಶ್ನೆ ಸಂಖ್ಯೆ: 199 (330) ಕ್ಕೆ ಅನುಬಂಧ –2

ಬೀದರ್ ಉತ್ತರ ವಿಧಾನ ಸಭಾಮತ ಕ್ಷೇತ್ರವಾರು ಅಂಗನವಾಡಿ ಕೆಂದ್ರಗಳ ಮಾಹಿತಿ

ಕ್ರ ಸಂ.	ಅಂಗನವಾಡಿ ಕೇಂದ್ರಗಳ ಸಂಖ್ಯೆ	ಅಂಗನವಾಡಿ ಕಾರ್ಯಕರ್ತೆಯರು		ಅಂಗನವಾಡಿ ಸಹಾಯಕಿಯರು	
		ಕಾರ್ಯ ನಿರ್ವಹಿಸುತ್ತಿರುವ ಅಂಕಾಕ ಸಂಖ್ಯೆ	ಖಾಲಿ ಇರುವ ಅಂಕಾಕ ಹುದ್ದೆ	ಕಾರ್ಯ ನಿರ್ವಹಿಸುತ್ತಿರುವ ಅಂಸ ಸಂಖ್ಯೆ	ಖಾಲಿ ಇರುವ ಅಂಸ ಹುದ್ದೆ
1	235	219	16	207	28

ಬೀದರ್ ಉತ್ತರ ವಿಧಾನಸಭಾ ಮತ ಕ್ಷೇತ್ರವಾರು 2008 ರಿಂದ ಇಲ್ಲಿಯವರೆಗೆ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ನೇಮಕಾತಿ ಮಾಹಿತಿ

ಕ್ರ ಸಂ.	ನೇಮಕಾತಿಯಾದ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ	ನೇಮಕಾತಿಯಾದ ಅಂಗನವಾಡಿ ಸಹಾಯಕಿಯರ ಸಂಖ್ಯೆ
1	**2**	**3**
1	17	41